ಶ್ರೀ ವಸಂತ ಬಿ. ಸಾಲಿಯಾನ:– ತುರ್ತಾಗಿ ದೂರವಾಣಿ ಮುಖಾಂತರ ಈ ಉತ್ತರವನ್ನು ತರಿಸಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಡೆಪ್ಯೂಟಿ ಕಮಿಷನರ್‌ರವರ ಮೂಲಕ ವಿಚಾರಣೆ ಮಾಡಿಸಿ ಉತ್ತರ ಬಂದ ತಕ್ಷಣ ಇದರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ನೌಕರರ ಹಾಗೂ ವಿದ್ಯಾರ್ಥಿಗಳ ಮುಷ್ಕರ

ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದುಕೊಂಡು, ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ನೌಕರರು ಮತ್ತು ವಿದ್ಯಾರ್ಥಿಗಳು ಇವತ್ತು ಇಡೀ ರಾಜ್ಯಾದ್ಯಂತ ಮುಷ್ಕರ ಮಾಡುತ್ತಿದ್ದಾರೆ. ದಿನಾಂಕ: 24-2-93ರಿಂದ ಧರಣಿ, ಸತ್ಯಾಗ್ರಹ ಮಾಡುತ್ತಿದ್ದಾರೆ. 8-3-93ರಿಂದ ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಮತ್ತು ಇವತ್ತು ವಿಧಾನಸೌಧ ಚಲೋ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ವಿಚಾರದ ಬಗ್ಗೆ ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮತ್ತು ಲೇಬರ್ ಮಿನಿಸ್ಟರ್ ಜೊತೆ ಚರ್ಚೆ ಮಾಡಿದ್ದೆ. ಅವರೂ ಸಹಾ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಕೂಡಾ ಯಾವುದೂ ಪರಿಹಾರ ಕಂಡುಹಿಡಿದಿದ್ದು ಕಾಣಬರುತ್ತಿಲ್ಲ. ರಾಜ್ಯದಲ್ಲಿ 144 ಖಾಸಗಿ ಐಟಿಐಗಳು ಇವೆ. ಸರ್ಕಾರಿ ಐಟಿಐಗಳು 44 ಇವೆ. ಖಾಸಗಿ ಐಟಿಐಗಳನ್ನು ಗ್ರಾಂಟ್ ಇನ್ ಏಡ್ ಕೋಡ್‌ನಲ್ಲಿ ತಂದಿಲ್ಲ. ಅವುಗಳನ್ನು ಗ್ರಾಂಟ್ ಇನ್ ಕೋಡ್ ವ್ಯಾಪ್ತಿಗೆ ತರಬೇಕೆಂದು ಅವರ ಬೇಡಿಕೆ. ಹಾಗಾಗಿ ಅದರ ಬಗ್ಗೆ ವಿಧಾನಸೌಧ ಚಲೋ ಕಾರ್ಯಕ್ರಮ ಮಾಡುತ್ತೇವೆಂದು ಹೇಳಿದಾಗ ಅಲ್ಲಲ್ಲೇ ಅವರನ್ನು ತಡೆದುಬಿಟ್ಟಿದ್ದಾರೆ. ಅವರು ಬೆಂಗಳೂರಿಗೆ ಮುಟ್ಟಲಿಕ್ಕೇ ಕೊಟ್ಟಿಲ್ಲ. ಅವರ ಮೇಲೆ ಅರೆಸ್ಟ್‌ಕೆರೆಯಲ್ಲಿ ಲಾಠಿಚಾರ್ಜ್ ಮಾಡಿದ್ದಾರೆ. ಖಾಸಗಿ ಐಟಿಐಗಳಲ್ಲಿ 1504 ಇನ್‌ಸ್ಟ್ರಕ್ಟರ್‌ಗಳು ಕೆಲಸ ಮಾಡುತ್ತಿದ್ದಾರೆ. 10 ಸಾವಿರ ವಿದ್ಯಾರ್ಥಿಗಳು ಅಲ್ಲಿ ಕಲಿಯುತ್ತಿದ್ದಾರೆ. ಬಿಎ, ಬಿಕಾಂ ಗ್ರಾಜ್ಯುಯೇಟ್ ಆಗುವುದಕ್ಕಿಂತ ತಾಂತ್ರಿಕ ತರಬೇತಿ ಪಡೆಯುವುದು ಬಹಳ ಉತ್ತಮವಾಗಿದೆ. ತಾಂತ್ರಿಕ ಶಿಕ್ಷಣಕ್ಕೆ ಮಹತ್ವ ಕೊಡುವ ಅವಶ್ಯಕತೆ ಬಂದಿದೆ. ಸರ್ಕಾರವೂ ಸಹಾ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತದೆ ಎಂದು ಹೇಳಿದ ಮೇಲೆ, ಅದನ್ನು ಗ್ರಾಂಟ್ ಇನ್ ಏಡ್ ಕೋಡ್ ವ್ಯಾಪ್ತಿಗೆ ತರುವುದಕ್ಕೆ ಏನು ಕಷ್ಟ ಇದೆ ? ಇದನ್ನು ಸರ್ಕಾರ ಗ್ರಾಂಟ್ ಇನ್ ಏಡ್ ಕೋಡ್ ಒಳಗೆ ತರಬೇಕಾಗುತ್ತದೆ. ಮಾನ್ಯ ಸಚಿವರು ಮೇಲ್ಮನೆಯಲ್ಲಿ ಉತ್ತರ ಕೊಡುವಾಗ ಗ್ರಾಂಟ್ ಇನ್ ಏಡ್ ಕೋಡ್‌ಗೆ ಇವುಗಳನ್ನು ತರಬೇಕಾದರೆ 30 ಕೋಟಿ ರೂಪಾಯಿ ಸರ್ಕಾರದಿಂದ ಕೊಡಬೇಕಾಗುತ್ತದೆಂದು ಹೇಳಿದ್ದಾರೆ. ನನಗೆ ಗೊತ್ತಿದ್ದ ಹಾಗೆ 30 ಕೋಟಿ ರೂಪಾಯಿಗಳಾಗುವುದಿಲ್ಲ. ಅಧಿಕಾರಿಗಳು ತಪ್ಪು ಕಲ್ಪನೆಯಿಂದ ಇದನ್ನು ಹೇಳಿದ್ದಾರೆ. ಲೆಕ್ಕದ ಪ್ರಕಾರ ಹೇಳುವುದಾದರೆ, ರಾಜ್ಯದಲ್ಲಿ 144 ಖಾಸಗಿ ಐಟಿಐಗಳು ಇವೆ. ಪ್ರತಿಯೊಂದು ಐಟಿಐ ನಲ್ಲಿ 7 ಟ್ರೇಡ್ ಇದ್ದರೆ, ಒಂದು ಟ್ರೇಡ್‌ಗೆ 2 ಲಕ್ಷ ರೂಪಾಯಿ ಬೇಕಾಗುತ್ತದೆ. ಸ್ಯಾಲರಿ, ರಾ–ಮೆಟೀರಿಯಲ್ ಎಲ್ಲಾ ಸೇರಿ. ಅಂದರೆ ಟೋಟಲ್ 395 ಟ್ರೇಡ್ಸ್ ಇವೆ. ಇದನ್ನು ಲೆಕ್ಕ ಹಾಕಿದರೆ 7 ಕೋಟಿ ರೂಪಾಯಿ ಮೇಲೆ ಸರ್ಕಾರಕ್ಕೆ ಬರುವುದಿಲ್ಲ ಮತ್ತು ತಾಂತ್ರಿಕ ಶಿಕ್ಷಣಕ್ಕೂ ಆದ್ಯತೆ ಕೊಟ್ಟ ಹಾಗೆ ಆಗುತ್ತದೆ. ಇವತ್ತು ಪ್ರೈವೇಟ್ ಐಟಿಐಗಳಲ್ಲಿ ಒಬ್ಬ ವಿದ್ಯಾರ್ಥಿಗೆ ಎರಡು ವರ್ಷಕ್ಕೆ 6 ಸಾವಿರ ಫೀ ತೆಗೆದುಕೊಳ್ಳುತ್ತಾರೆ.

ವಿದ್ಯಾರ್ಥಿಗಳ ಫೀಜು ಬಹಳ ಹೆಚ್ಚಾಗಿದೆ. ಇದರಲ್ಲಿ ಸರ್ಕಾರ ಇಂಟರ್‌ಪಿನ್ ಆಗಿಲ್ಲವೆಂದರೆ ತಾಂತ್ರಿಕ ಎಜ್ಯುಕೇಶನ್ ಏನಿದೆ ಅದರ ಮೇಲೂ ಪರಿಣಾಮವಾಗುತ್ತದೆ. ಇವತ್ತು ಎಲ್ಲಾ ನೌಕರರುಗಳಿಗೆ ಗ್ರಾಂಟ್‌ಅನ್ನು ಕೊಡುವ ಬದಲು ಸ್ಯಾಲರಿಯನ್ನು ಕೊಡುವ ವ್ಯವಸ್ಥೆಯಾಗಬೇಕು. ಅವರಿಗೆ ರಾ ಮೆಟೀರಿಯಲ್ ಕೊಡುವ ವ್ಯವಸ್ಥೆ ಈ ಸರ್ಕಾರದಿಂದ ಆಗಬೇಕು. ಒಂದು ಟ್ರೇಡ್‌ಗೆ 16 ಜನ ವಿದ್ಯಾರ್ಥಿಗಳಿಗೆ ಮಾತ್ರ ನಾವು ಅಡ್ಮಿಷನ್ ಮಾಡಿಕೊಳ್ಳುತ್ತೇವೆ. ಅದಕ್ಕಾಗಿ ಹೆಚ್ಚಿನ ಫೀಜನ್ನು

ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಹಾಗಾಗಿ ಸರ್ಕಾರಿ ಐ.ಟಿ.ಐ.ನಲ್ಲಿ ಯಾವ ಪ್ರಕಾರ ಒಂದು ಕೋರ್ಸಿಗೆ 40–50 ಹುಡುಗರನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ ಅದೇ ಪ್ರಕಾರ ಸರ್ಕಾರ ಕ್ರಮ ತೆಗೆದುಕೊಂಡರೆ ಆ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ. ಇಡೀ ರಾಜ್ಯದಿಂದ ಇವತ್ತು ವಿದ್ಯಾರ್ಥಿಗಳು ಬಂದಿದ್ದಾರೆ. ಐ.ಟಿ.ಐ ಇನ್‌ಸ್ಟ್ರಕ್ಟರ್ಸ್ ಬಂದಿದ್ದಾರೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಈ ಸಮಸ್ಯೆ ಇವತ್ತಿನ ಸಮಸ್ಯೆ ಅಲ್ಲ. ಕಳೆದ 2–3 ವರ್ಷಗಳಿಂದ ಈ ಸಮಸ್ಯೆ ಸರ್ಕಾರದ ಗಮನಕ್ಕೆ ಬರುತ್ತಿದೆ. ಇಲ್ಲಿರುವ ಜನರು ಯಾರಿದ್ದಾರೆ ಅವರಿಗೆ ಹಳ್ಳಿಯ ಅನುಭವ ಇದೆ. ಕಳೆದ 10 ವರ್ಷಗಳಿಂದ ಇವರು ಕೆಲಸ ಮಾಡುತ್ತಿದ್ದಾರೆ, ಇವರಿಗೆ ಹಳ್ಳಿಯ ಅನುಭವ ಇದೆ. ಇಲ್ಲಿ ವಿದ್ಯಾರ್ಥಿಗಳ ಹಿತ, ಇನ್‌ಸ್ಟ್ರಕ್ಟರ್ಸ್ ಹಿತ ಮತ್ತು ಸರ್ಕಾರದ ಹಿತ ಕೂಡ ಇದೆ. ನಾನು ಈಗಾಗಲೇ ಹೇಳಿದ ಹಾಗೆ ಬಿ.ಎ., ಬಿ.ಕಾಂ., ಗ್ರಾಜ್ಯುಯೇಟ್ ಮಾಡಿಕೊಂಡಿರುವ ಹುಡುಗರು ನಮ್ಮ ಹತ್ತಿರ ಕೆಲಸ ಕೊಡಿಸಿ ಎಂದು ಪ್ರತಿದಿನ ಬರುತ್ತಾರೆ. ಆದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಹಳ್ಳಿಯಲ್ಲಿ ಒಂದು ಗೌರ್ನಮೆಂಟ್ ಐ.ಟಿ.ಐ ಮಾಡಿದರೆ ಎಷ್ಟು ವಿದ್ಯಾರ್ಥಿಗಳು ಐ.ಟಿ.ಐ ಕೋರ್ಸ್ ಮಾಡಿದರೆ ಅವರೆಲ್ಲರಿಗೂ ನೌಕರಿಯನ್ನು ಕೊಡಲಿಕ್ಕೆ ನಮಗೆ ಸಾಧ್ಯವಾಗಿದೆ. ಇದಕ್ಕೆ ಸ್ಕೋಪ್ ಇದೆ, ಇದನ್ನು ಸ್ಟ್ರೆಂಗ್ತನ್ ಮಾಡಬೇಕು. ಟೆಕ್ನಿಕಲ್ ಎಜ್ಯುಕೇಶನ್ ಗೌರ್ನಮೆಂಟ್‌ನಿಂದ ಆಗಬೇಕಾಗುತ್ತದೆ. ಹಾಗಾಗಿ ಪ್ರೈವೇಟ್ ಐ.ಟಿ.ಐ.ಗೂ ಸಹ ಗ್ರಾಂಟ್ ಇನ್ ಕೋಡ್ ಜಾರಿಗೆ ತರುವ ವ್ಯವಸ್ಥೆ ಸರ್ಕಾರದಿಂದ ಆಗಬೇಕು. ಸರ್ಕಾರದಿಂದ ಇದಕ್ಕೆ 30–35 ಕೋಟಿ ಖರ್ಚಾಗುತ್ತದೆ ಎನ್ನುವುದು ತಪ್ಪು. ಕೇವಲ 7 ಕೋಟಿ ರೂಪಾಯಿಯಲ್ಲಿ ಈ ಕೆಲಸ ಆಗುತ್ತದೆ. 144 ಪ್ರೈವೇಟ್ ಐ.ಟಿ.ಐ. ಇದ್ದರೂ ಸಹ ಇದಕ್ಕೆ ಕೆಲವು ಕಂಡೀಷನ್ಸ್ ಇವೆ. ಗ್ರಾಂಟ್ ಇನ್ ಏಡ್ ಕೋಡ್‌ಗೆ ತರಬೇಕಾದರೆ ಕೆಲವು ಕಂಡೀಷನ್ಸ್ ಇವೆ. ಅಲ್ಲಿಯ ಕೆಲವು ಕಂಡೀಷನ್ಸ್‌ಗೆ ಅಪ್ಲೈ ಮಾಡಬೇಕಾಗುತ್ತದೆ. ಅಲ್ಲಿಗೆ ಮಿಷನರೀಸ್‌ಗಳನ್ನು ತರಬೇಕಾಗುತ್ತದೆ, ಇನ್ಸ್‌ಟ್ರುಮೆಂಟ್ಸ್ ತರಬೇಕಾಗುತ್ತದೆ, ಅದನ್ನು ಅವರು ಮಾಡದೇ ಇದ್ದರೆ ಗ್ರಾಂಟ್ ಇನ್ ಏಡ್ ಸಿಗುವುದಿಲ್ಲ. 7 ಕೋಟಿ ರೂಪಾಯಿಗಿಂತ ಕಡಿಮೆ ಬರ್ಡನ್ ಸರ್ಕಾರಕ್ಕೆ ಬರುತ್ತದೆ. ಹಾಗಾಗಿ ಸರ್ಕಾರ ಗ್ರಾಂಟ್ ಇನ್ ಏಡ್ ಕೋಡ್‌ಗೆ ಕೊಡಬೇಕು. ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳು ಏನಿವೆ, ಫೀಜ್‌ಗಳು ಏನು ಹೆಚ್ಚಾಗಿವೆ ಅದನ್ನು ಸಹ ಕಡಿಮೆ ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಸರಿಯಾಗಿ ಸಿಗುತ್ತಿಲ್ಲ. ಪ್ರೈವೇಟ್ ಐ.ಟಿ.ಐನಲ್ಲಿ ವಿದ್ಯಾರ್ಥಿ ಸ್ಟೈಫಂಡರಿ ಕೊಡುತ್ತಿಲ್ಲ. ಗೌರ್ನಮೆಂಟ್ ಐ.ಟಿ.ಐ ನಲ್ಲಿ ಸ್ಟೈಫಂಡ್ ಕೊಡುತ್ತಿದ್ದಾರೆ. ಅಲ್ಲಿಯೂ ಕೂಡ ಕೊಡುವಂತಹ ವ್ಯವಸ್ಥೆ ಸರ್ಕಾರದಿಂದ ಆಗಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ದೇಶಪಾಂಡೆಯವರು ಇದರ ಬಗ್ಗೆ ವಿವರವಾಗಿ ಹೇಳಿದ್ದಾರೆ. ನಾವು ಕಳೆದ 4–5 ದಿವಸಗಳಿಂದ ಈ ನೋಟೀಸನ್ನು ಕಳುಹಿಸಿ ಈ ವಿಷಯ ಪ್ರಸ್ತಾಪ ಮಾಡಬೇಕೆಂದು ಪ್ರಯತ್ನ ಮಾಡಿದೆವು. ಸುಮಾರು 15,000 ವಿದ್ಯಾರ್ಥಿಗಳು 144 ಪ್ರೈವೇಟ್ ಐ.ಟಿ.ಐಗಳಲ್ಲಿ ಅಭ್ಯಾಸವನ್ನು ಮಾಡುತ್ತಿದ್ದಾರೆ. ಇಲ್ಲಿ ಸರ್ಕಾರದ ತಪ್ಪು ಕಲ್ಪನೆ ಏನಾಗಿದೆ ಎಂದರೆ ಇದನ್ನು ಗ್ರಾಂಟಿನೇಡ್ ಕೋಡ್‌ಗೆ ತಂದರೆ ನಮಗೆ ಸುಮಾರು 30 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಪದೇ ಪದೇ ಉತ್ತರ ಕೊಟ್ಟಿದ್ದಾರೆ. ಇದು ಅಲ್ಲ; ನಾವು ಅಂಕಿ ಅಂಶಗಳನ್ನು ಸಂಬಂಧಪಟ್ಟಂಥ ಸಚಿವರಿಗೆ ಮನದಟ್ಟು ಮಾಡಿಕೊಡುವಂತಹ ಪ್ರಯತ್ನ ಮಾಡಿ, ಇದನ್ನು ಗ್ರಾಂಟಿನೇಡ್ ಕೋಡ್‌ಗೆ ತರುವುದರಿಂದ 5 ಕೋಟಿ ರೂಪಾಯಿ ಇವರ ಮೈಮೇಲೆ ಬರುತ್ತದೆ. ಈ ರೀತಿ ಐ.ಟಿ.ಐ.ಗಳಲ್ಲಿ ವಿದ್ಯಾರ್ಥಿಗಳು ಕಲಿಯುವುದರಿಂದ, ತಕ್ಷಣ ಹುದ್ದೆಯು ಸಿಗುವಂತಹ ಈ ಕೆಲಸ ಕಾರ್ಯಕ್ಕೆ ಹೆಚ್ಚಿನ ಸಹಕಾರವನ್ನು ಸರ್ಕಾರ ನ್ಯಾಯವಾಗಿ ಕೊಡಬೇಕಾಗಿತ್ತು. ಪ್ರೈವೇಟ್‌ನವರು ಈ ಭಾರವನ್ನು ಹೊತ್ತಿರುವಂತಹ ಈ ಸಂದರ್ಭದಲ್ಲಿ ಅಲ್ಲಿರುವಂತಹ ನೌಕರರಿಗೆ ಗ್ರಾಂಟಿನೇಡ್

ಕೋಡ್‌ಗೆ, ತರುವುದರಲ್ಲಿ ಸರಿಯಾದಂತಹ ವ್ಯವಸ್ಥೆಯಾದರೆ ಅಲ್ಲಿರುವಂತಹ ಬ್ಯಾಕ್‌ವರ್ಡ್, ಷೆಡ್ಯೂಲ್ಡ್ ಕ್ಯಾಸ್ಟ್, ಈ ವಿದ್ಯಾರ್ಥಿ, ವಿದ್ಯಾರ್ಥಿನಿಯರು ದೊಡ್ಡ ಪ್ರಮಾಣದಲ್ಲಿ ಇಲ್ಲಿ ಅಭ್ಯಾಸವನ್ನು ಮಾಡುತ್ತಾರೆ. ಅದಕ್ಕೋಸ್ಕರ 5 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಈ 144 ಸಂಸ್ಥೆಗಳನ್ನು ಉಳಿಸಿದ ಹಾಗೆ ಆಗುತ್ತದೆ. ಇಲ್ಲಿ ಕೆಲಸ ಮಾಡುತ್ತಿರತಕ್ಕ ಸಿಬ್ಬಂದಿಯನ್ನು ಉಳಿಸಿದಂತಾಗುತ್ತದೆ. ಇದಕ್ಕೆ 30–35 ಕೋಟಿ ರೂಪಾಯಿ ಪ್ರತಿವರ್ಷ ಖರ್ಚಾಗುತ್ತದೆ ಎನ್ನುವುದು ಸರಿಯಲ್ಲ. 5 ಕೋಟಿ ರೂಪಾಯಿ ಒಂದು ವರ್ಷಕ್ಕೆ ಖರ್ಚು ಬರುತ್ತದೆ ಅಷ್ಟೆ. ದಯಮಾಡಿ ಸರ್ಕಾರ ಒಪ್ಪಿಕೊಂಡು ಈ ಐ.ಟಿ.ಐ.ಗಳನ್ನು ಉಳಿಸಬೇಕು. ಅಲ್ಲಿರುವಂತಹ ಸಿಬ್ಬಂದಿಯನ್ನು, ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳ ಅಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ:– ಮಾನ್ಯ ದೇಶಪಾಂಡೆಯವರು ಮತ್ತು ಮಾನ್ಯ ಯಡಿಯೂರಪ್ಪನವರು ಐ.ಟಿ.ಐ.ಗಳನ್ನು ಗ್ರಾಂಟಿನೇಡ್‌ನಲ್ಲಿ ಒಳಪಡಿಸಬೇಕು ಮತ್ತು ರಾ ಮೆಟೀರಿಯಲ್ಸ್ ಪ್ರೊವೈಡ್ ಮಾಡುವುದು, ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಸಹ ಕೊಡುವಂತಹ ವಿಷಯದ ಬಗ್ಗೆ ಮಾತನಾಡಿದ್ದಾರೆ. ಇದು ಕಾರ್ಮಿಕ ಮಂತ್ರಿಯವರಿಗೆ ಸಂಬಂಧಪಟ್ಟಿರತಕ್ಕಂಥ ವಿಷಯವಾಗಿದೆ. ಈ ವಿಷಯವನ್ನು ಅವರ ಗಮನಕ್ಕೆ ತಂದು ಆದಷ್ಟು ಜಾಗ್ರತೆ ಅದರ ಬಗ್ಗೆ ಅವರು ಹೇಳಿಕೆಯನ್ನು ಕೊಡಲಿಕ್ಕೆ ನಾನು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ:– ಕಾರ್ಮಿಕ ಮಂತ್ರಿಗಳು ಇವತ್ತು ಇಲ್ಲ, ಅವರಿಂದ ನಾವು ಉತ್ತರವನ್ನು ಅಪೇಕ್ಷೆ ಪಡುತ್ತೇವೆ. ಇವತ್ತು ಅವರು ವಿಧಾನಸೌಧ ಚಲೋ ಮಾಡುತ್ತಿದ್ದಾರೆ. ಕಾರ್ಮಿಕ ಮಂತ್ರಿಗಳು ಇವತ್ತು ಇಲ್ಲಿಗೆ ಬಂದು ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್‌ಅನ್ನು ಕೊಡಲಿ.

ಅಧ್ಯಕ್ಷರು:– ತಾವು ತಕ್ಷಣ ಇದನ್ನು ಕಾರ್ಮಿಕ ಮಂತ್ರಿಯವರ ಗಮನಕ್ಕೆ ತರಬೇಕು. ಆದಷ್ಟು ಶೀಘ್ರವಾಗಿ ಹೇಳಿಕೆಯನ್ನು ಕೊಡಿಸಬೇಕು.

2. Termination of 40 lecturers from MPJ College of Engineering, White Field

SRI SUBHASH S. JOSHI:- Hon. Sir, from the MPJ College of Engineering, White Field Bangalore, 40 lecturers have been terminated without any reason. Their only fault is that they have formed a Union to fight against the management, who is terminating them actually and now they have been totally dismissed from the services. Therefore, when they are exercising their democratic right, they were terminated. So, what action the Hon. Education Minister is going to take against that management?

SRI S.M. YAHYA:- This has been brought to my notice by the Hon. Member. I will immediately ask the Director to look into this matter.

೨ ಅರೆಕಾಲಿಕ ಉಪನ್ಯಾಸಕರ ಮುಷ್ಕರದ ಬಗ್ಗೆ ಶಿಕ್ಷಣ ಸಚಿವರ ಹೇಳಿಕೆ

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಶಿಕ್ಷಣ ಸಚಿವರಿಂದ ಅರೆಕಾಲಿಕ ಉಪನ್ಯಾಸಕರ ಬಗ್ಗೆ ಹೇಳಿಕೆ